# ಹೃದಯವಂತಿಕೆ

ಹೃದಯವಂತಿಕೆ, ಹೃದಯ ಶ್ರೀಮಂತಿಕೆ, ಹೃದಯ ಮಂದಿರ, ಹೃದಯ ಸಂವಾದ, ಹೃದಯ ವೈಶಾಲ್ಯ – ಬಳಕೆಗೆ ಸುಲಭವಾಗಿ ಒದಗಿಬರುವ ಈ ಪದಗಳು, ಅನುಸರಣೆಗೆ ಕಠಿಣವಾದವುಗಳು. ಇವುಗಳಿಗೆ ವಿರುದ್ಧ ಪದಗಳ ರೂಪದಲ್ಲಿ ಹೃದಯಾಘಾತ, ಹೃದಯ ವೈಫಲ್ಯ, ಸಂಕುಚಿತ ಹೃದಯದಂತಹ ಪ್ರಯೋಗಗಳನ್ನು ಗಮನಿಸಬಹುದು. ವೈದ್ಯಕೀಯ ಪರಿಭಾಷೆಯಲ್ಲಷ್ಟೇ ಅಲ್ಲ, ಸಾಮಾಜಿಕ ಪರಿಭಾಷೆಯಲ್ಲೂ 'ಹೃದಯ' ಸಂಕೀರ್ಣವಾದುದು.

ಹೃದಯದ ವೈದ್ಯಕೀಯ ಭಾಷೆಯ ಬಗ್ಗೆ ಜನಸಾಮಾನ್ಯರಿಗೆ ಆಸಕ್ತಿದಾಯಕವಾದುದಲ್ಲ. ನಮ್ಮ ದೈನಂದಿನ ಬದುಕಿನ ಚೆಲುವಿಗೆ, ಹೃದಯ ಸಂವಾದ ಹಾಗೂ ಶ್ರೀಮಂತಿಕೆಗೆ ಸಂಬಂಧಿಸಿದ ಸಂಗತಿಗಳು ಮುಖ್ಯವಾದವು. ಆ ಹೃದಯವಂತಿಕೆಯನ್ನು ನಿರೂಪಿಸುವ ಕಥನಗಳು ಜನಪದರಲ್ಲೂ ಇವೆ, ಲಿಖಿತ ಸಾಹಿತ್ಯದಲ್ಲೂ ಸಾಕಷ್ಟಿವೆ. ಅಂಥದೊಂದು ಕಥೆ 'ಹೃದಯವಂತರು.' ಇ–ಕಾರ್ಡ್ ರೂಪದಲ್ಲಿ ಹೃದಯದಿಂದ ಹೃದಯ ತಲುಪುತ್ತಿರುವ ಇಂಗ್ಲಿಷ್‌ನಲ್ಲಿನ ಈ ಕಥೆ ಅನಾಮಿಕ ಕಥೆಗಾರನದು. ಹೃದಯಕ್ಕೆ ನಿರ್ದಿಷ್ಟ ಹೆಸರೊಂದನ್ನು ಹಚ್ಚುವುದು ಎಷ್ಟು ಅರ್ಥಹೀನ ಎನ್ನುವ ಅರಿವು, ಕಥೆಗಾರ ತನ್ನ ಹೆಸರನ್ನು ಕಥೆಯೊಂದಿಗೆ ಹಚ್ಚುವ ಗೋಜಿಗೆ ಹೋಗದಿರಲು ಕಾರಣವೆ? ಕಥೆ ಮುಖ್ಯವೇ ಹೊರತು ಕಥೆಗಾರನಲ್ಲವಾದುದರಿಂದ, 'ಹೃದಯವಂತರು' ಕಥನವನ್ನು ಗಮನಿಸೋಣ. ಕಥೆ ಹೀಗಿದೆ:

*'ಊರಿನಲ್ಲಿಯೇ ಮಿಗಿಲಾದದ್ದು ನನ್ನ ಹೃದಯ. ಎಲ್ಲಿಯಾದರೂ ಕಂಡಿರಾ, ಇಷ್ಟು ಚೆಲುವಾದ, ನಗಾರಿ ದನಿಯ, ದೃಢವಾದ ಎದೆಯ.'*

*ನಾಲ್ಕೂ ಬೀದಿಗಳು ಕೂಡುವ ಚೌಕದಲ್ಲಿ ಚಿಗುರು ಮೀಸೆಯ ಹುಡುಗ ತನ್ನ ಹೃದಯವ ಮುಟ್ಟಿ ಮುಟ್ಟಿ ನೋಡುತ್ತ ಎತ್ತಿ ತೋರಿಸುತ್ತ ಜಂಬ ಕೊಚ್ಚುತ್ತಿದ್ದರೆ, ಜನ ಗುಂಪಾದರು.*

*'ಹೌದು, ಇದು ಬಹಳ ಸೊಗಸಾದ ಹೃದಯ. ಎಳ್ಳಷ್ಟೂ ಕೊರೆಯಿಲ್ಲ. ಹುಡುಕಿದರೂ ಗಾಯದ ಕಲುಮೆಯಿಲ್ಲ. ಹೃದಯವೆಂದರೆ ಇದುವೇನೆ!' ಎಂದು ಊರಿನ ಜನ ಹೊಗಳುತ್ತಿದ್ದರೆ ಉಕ್ಕು ಹರಯದ ಹುಡುಗ ಉಬ್ಬಿಹೋದ.*

*ಇದ್ದಕ್ಕಿದ್ದಂತೆ, ಗುಂಪನ್ನು ಸೀಳುತ್ತ ರಾಧೇಯನಂತೆ ನುಗ್ಗಿ ಬಂದ ಬಿರುಗಾಳಿಯ ಮುದುಕ. 'ಅದೆಂಥಾ ಹೆಚ್ಚುಗಾರಿಕೆ ನಿನ್ನ ಹೃದಯದ್ದು? ನನ್ನ ಹೃದಯಕ್ಕಿಂತ ನಿನ್ನ ಹೃದಯ ಯಾವುದರಲ್ಲಿ ಮಿಗಿಲು?' ಎಂದು ಮುದುಕ ಹುಡುಗನ ಎದೆಗೆ ಎದೆಯೊಡ್ಡಿದ. ಹುಡುಗನೊಂದಿಗೆ ಗುಂಪೂ ಆಳೆದೂ ತೂಗಿ ಮುದುಕನ ಹೃದಯದಲ್ಲಿ ಇಂಚಿಂಚೂ ಇಣುಕಿತು. ಅದು ಗಟ್ಟಿಯಾಗೇನೊ ಹೊಡೆದುಕೊಳ್ಳುತ್ತಿತ್ತು. ಆದರೆ, ಹೃದಯದ ತುಂಬಾ ಗಾಯದ ಕಲೆಗಳು. ಕೆಲವು ಭಾಗಗಳು ಕಳೆದುಹೋಗಿದ್ದವು. ಆ ಜಾಗದಲ್ಲಿ ಜೋಡಿಸಿದ್ದ ಬೇರೆ ಹೃದಯದ ಭಾಗಗಳು ಹೊಂದಾಣಿಕೆಯಾಗದೆ ಅಲ್ಲೆಲ್ಲಾ ಏರು ತಗ್ಗು. ಗುಂಪು ಗೊಂದಲಕ್ಕೆ ಬಿತ್ತು. ಮುದುಕನ ಹೃದಯದ ಅಗ್ಗಳಿಕೆಯಾದರೂ ಎಂಥಾದ್ದು? ಹರಯದ ಹೃದಯಕ್ಕೆ ಸಂಜೆಗಾಲದ ಹೃದಯ ಸರಿಸಾಟಿಯೆ?*

*ಯುವಕ ಸಿಗ್ಗಿಲ್ಲದೆ ಕೇಳಿಯೇ ಬಿಟ್ಟ. 'ಎಲೆ ಮುದುಕ, ನೀನೇನು ತಮಾಷೆ ಮಾಡುತ್ತಿದ್ದೀಯ? ನಮ್ಮಿಬ್ಬರ ಹೃದಯಗಳನ್ನು ಹೋಲಿಸಿ ನೋಡು. ನನ್ನದು ಎಲ್ಲಾ ಬಗೆಯಲ್ಲಿ ಸಮರ್ಥ. ನಿನ್ನದೋ ಗುಳಿ ಗಾಯಗಳ ದುರ್ಬಲ ಹೃದಯ' ಎಂದು ಹುಡುಗ ಒರಟಾಗಿ ನುಡಿದ, ನಗೆಯಾಡಿದ.*

*ಮುದುಕ ಒಪ್ಪಿಕೊಂಡ. 'ಹೌದಪ್ಪ, ನನ್ನ ಹೃದಯದೊಂದಿಗೆ ಹೋಲಿಸಿದರೆ ನಿನ್ನದು ಚೆಲುವೇ. ಆದರೆ, ನನ್ನ ಹೃದಯವನ್ನು ಸ್ವಲ್ಪ ಗಮನವಿಟ್ಟು ನೋಡು. ಇಲ್ಲಿನ ಪ್ರತಿಯೊಂದು ಗಾಯದ ಕಲೆಯೂ ನಾನು ಪ್ರೀತಿ ಹಂಚಿಕೊಂಡ ಮನುಷ್ಯನ ಸಂಕೇತ. ಎಷ್ಟೊಂದು ಜನರೊಂದಿಗೆ ನನ್ನ ಹೃದಯದ ಭಾಗಗಳನ್ನು ಹಂಚಿಕೊಂಡಿದ್ದೇನೆ! ಬದಲಿಗೆ ಅವರ ಹೃದಯದ ಭಾಗಗಳನ್ನು ಪಡೆದು ಖಾಲಿಯನ್ನು ತುಂಬಿಕೊಳ್ಳಲು ಪ್ರಯತ್ನಿಸಿದ್ದೇನೆ. ಬದಲಿಸಿಕೊಂಡ ತುಣುಕುಗಳು ಹೊಂದಾಣಿಕೆಯಾಗುತ್ತಿಲ್ಲ, ನಿಜ. ಕೆಲವು ತುದಿ ಒರಟಾಗಿಯೂ ಇವೆ. ಕುಳಿಗಳೂ ಉಳಿದಿವೆ. ಆದರೂ, ನಾನು ಹಿತ ಅನುಭವಿಸುತ್ತಿದ್ದೇನೆ. ಯಾಕೆಂದರೆ, ನನ್ನದು ಪ್ರೀತಿಯ ಹೃದಯ, ಪ್ರೀತಿ ಹಂಚಿಕೊಂಡ ಹೃದಯ.*

*ಕೆಲವೊಮ್ಮೆ ಹೃದಯದ ಭಾಗವನ್ನು ಪಡೆದ ಮನುಷ್ಯ, ಅವನ ಹೃದಯದ ಭಾಗವನ್ನು ಕೊಡದಿರುವುದೂ ಉಂಟು. ಅಲ್ಲೆಲ್ಲಾ ಆಳ ಗಾಯಗಳಿವೆ. ಈ ಗಾಯಗಳು ತುಂಬಾ ನೋವಿನವು. ಅವು ನಾನು ಕಳಕೊಂಡದ್ದನ್ನು ನೆನಪಿಸುತ್ತಲೇ ಇರುತ್ತವೆ. ಆದರೂ, ಆ ಕೆಲವು ಮಂದಿ, ಯಾವತ್ತಾದರೂ ಪಡೆದದ್ದನ್ನು ಹಿಂತಿರುಗಿಸಿಯೇ ತೀರುತ್ತಾರೆ. ಅದಕ್ಕಾಗಿ ನಾನು ಕಾಯುತ್ತೇನೆ. ಈಗ ಹೇಳು ನಿಜವಾದ ಸೌಂದರ್ಯ ಯಾವುದು.'*

*ಹುಡುಗ ದಂಗು ಹೊಡೆದುಬಿಟ್ಟ. ಗಲ್ಲಗಳಿಂದ ಇಳಿದ ಹನಿ ನೆಲ ಸೇರುತ್ತಿತ್ತು. ಆತ, ತನ್ನ ಮಟ್ಟಸವಾದ ಹೃದಯದಿಂದ ತಟಕ್ಕನೇ ಒಂದು ಭಾಗವನ್ನು ಕಿತ್ತು ಬಿಟ್ಟ. ತುಂಡರಿಸಿದ ಹೃದಯದ ಭಾಗವನ್ನು ತುಂಬಿಕೊಂಡ ನಡುಗುವ ಬೊಗಸೆಯನ್ನು ಮುದುಕನ ಮುಂದೊಡ್ಡಿದ. ಮುದುಕ ಒಪ್ಪಿಸಿಕೊಂಡ. ತನ್ನ ಹೃದಯಕ್ಕೆ ಬೆಸೆದುಕೊಂಡ. ಬದಲಿಗೆ ತನ್ನ ಹೃದಯದ ಒಂದು ಭಾಗವನ್ನು ಕಿತ್ತು ಹುಡುಗನ ಹೃದಯದ ಭಾಗಕ್ಕೆ ಜೋಡಿಸಿದ. ಸರಿಯಾಗಿ ಹೊಂದಿಕೊಳ್ಳಲಿಲ್ಲ. ಕೆಲವು ಏರುತಗ್ಗು ಉಳಿದವು.*

*ಹುಡುಗ ತನ್ನ ಹೃದಯವನ್ನು ನೋಡಿಕೊಂಡ. ಎಂದಿನ ಮಟ್ಟಸವನ್ನು ಕಳಕೊಂಡಿದ್ದರೂ, ಹಿಂದೆಂದಿಗಿಂತಲೂ ಕಡು ಚೆಲುವಾಗಿದೆ ಅನ್ನಿಸಿತು. ಯಾಕೆಂದರೆ, ಹುಡುಗನ ಹೃದಯದೊಳಕ್ಕೆ ಮುದುಕನ ಎದೆಯ ಭಾಗದಿಂದ ಪ್ರೀತಿ ಇಳಿಯುತ್ತಿತ್ತು. ಅವರಿಬ್ಬರೂ ಪರಸ್ಪರ ಆಲಿಂಗಿಸಿಕೊಂಡರು. ಆಮೇಲೆ, ಆ ಇಬ್ಬರು ಸುಂದರ ಹೃದಯಗಳ ಮನುಷ್ಯರು ಪಕ್ಕ ಪಕ್ಕದಲ್ಲಿಯೇ ನಡೆದುಹೋದರು.*

ಈ ಕಥೆ ಸಹೃದಯರ ಹೃದಯವನ್ನು ಭಾರಗೊಳಿಸದೆ ಇರುವುದೆ? ಬದುಕಿನ ಅರ್ಥಪೂರ್ಣತೆ ಇರುವುದೇ ಹೃದಯಗಳನ್ನು ಹಂಚಿಕೊಳ್ಳುವುದರಲ್ಲಿ, ಹೃದಯ ಸಂವಾದ ನಡೆಸುವುದರಲ್ಲಿ ಅಲ್ಲವೆ?

■ **ಚಂಪಕಮಾಲಾ**

## ಮಾತೇ ಮುತ್ತು

- ಅಸಹಿಷ್ಣುತೆಯು ಹಿಂಸೆಯ ಒಂದು ರೂಪ ಮತ್ತು ನಿಜವಾದ ಪ್ರಜಾಪ್ರಭುತ್ವದ ಬೆಳವಣಿಗೆಗೆ ಅದು ಅಡ್ಡಿಯಾಗಿರುತ್ತದೆ.
  —ಮಹಾತ್ಮ ಗಾಂಧಿ
- ಅಕ್ಷರ ಕಲಿತ ವ್ಯಕ್ತಿ ಭ್ರಷ್ಟನಾಗಬಹುದು, ಆದರೆ ಸಂಸ್ಕಾರ ಕಲಿತ ವ್ಯಕ್ತಿ ಎಂದೆಂದಿಗೂ ಭ್ರಷ್ಟನಾಗಲಾರ.
  —ಸಿದ್ಧೇಶ್ವರ ಸ್ವಾಮೀಜಿ
- ಆತ್ಮವಿಶ್ವಾಸ ಎಂಬುದು ಜನ್ಮಜಾತವಾಗಿ ಬರುವುದಿಲ್ಲ. ಅದನ್ನು ಅನುಭವದಿಂದ ಕಲಿಯಬೇಕು ಮತ್ತು ಗಳಿಸಬೇಕು.
  —ಗೌತಮ ಬುದ್ಧ
- ಎಲ್ಲಿಯವರೆಗೆ ಜೀವಿಸಿರುತ್ತೇವೆಯೋ ಅಲ್ಲಿಯವರೆಗೂ ಕಲಿಯುತ್ತಲೇ ಇರಬೇಕು.
  —ರಾಮಕೃಷ್ಣ ಪರಮಹಂಸ
- ಪ್ರೀತಿ ಎಂಬುದು ಆರೋಗ್ಯವಂತರ ಕಾಯಿಲೆ.
  —ಪಿ. ಲಂಕೇಶ್
- ಬರವೇ ಇರಲಿ, ಸಮೃದ್ಧಿ ಬರಲಿ ತಾಳುವ ಬಾಳಿನ ಬಾವುಟವಿರಲಿ.
  —ಕೆ.ಎಸ್. ನರಸಿಂಹ ಸ್ವಾಮಿ
- ನಮಗೆ ತಿಳಿದಿರುವುದು ಒಂದು ಹನಿಯಷ್ಟು ಮಾತ್ರ; ತಿಳಿಯದಿರುವುದು ಸಮುದ್ರದಷ್ಟು.
  —ಐಸಾಕ್ ನ್ಯೂಟನ್
- ಪರಿಸ್ಥಿತಿಗಳನ್ನು ಹಾಗೆಯೇ ಬಿಟ್ಟುಬಿಟ್ಟರೆ ಅದು ಎಂದಿಗೂ ಸರಿ ಹೊಂದುವುದಿಲ್ಲ.
  —ಚದುರಂಗ